

## ‘ಸಿಎಎ’ ವಿರುದ್ಧದ ದನಿಯಾದ ಹಾಡುಗಳು

ಸಿಎಎ, ಎನ್ಆರ್‌ಸಿ, ಎನ್‌ಪಿಆರ್ ವಿರುದ್ಧದ ಪ್ರತಿಭಟನೆಗಳಲ್ಲಿ ಘೋಷಣೆಗಳು ಮಾತ್ರವಲ್ಲ ಹಾಡುಗಳು ಕೂಡಾ ಪ್ರತಿಭಟನೆಯ ಅಸ್ತ್ರವಾಗಿವೆ.

ಎನ್ಆರ್‌ಸಿ ವಿರೋಧಿ ವರುಣ್ ಗ್ರೋವರ್ ರಚಿಸಿದ ಹಮ್ ಕಾಗಜ್ ನಹೀ ದಿಖಾಯೇಂಗೇ, ಫೈಜ್ ಅಹ್ಮದ್ ಫೈಜ್ ಅವರ ಹಮ್ ದೇಖೇಂಗೆ ಕವಿತೆ ಹೆಚ್ಚು ಪರಿಣಾಮಕಾರಿಯಾಗಿ ಬಳಸಲ್ಪಟ್ಟಿತು. ಹಮ್ ಕಾಗಜ್ ನಹೀ ದಿಖಾಯೇಂಗೆ ಎಂಬ ಕವಿತೆ, ಕಾಗದ ನಾವು ತೋರ್ಸಲ್ಲ ಎಂಬುದಾಗಿಯೂ ಹಮ್ ದೇಖೇಂಗೆ ಎಂಬ ಕವಿತೆ ನಾವು ನೋಡೋಣ ಎಂದು ಕನ್ನಡಕ್ಕೆ ಅನುವಾದವಾಗಿದೆ.

ಜೆಎನ್‌ಯು ಹಿಂಸಾಚಾರ ಖಂಡಿಸಿ ನಡೆದ ಮುಂಬೈನಲ್ಲಿ ನಡೆ ಪ್ರತಿಭಟನೆಯಲ್ಲಿ ಪ್ರತಿಭಟನಕಾರರೊಬ್ಬರು ವಾಚಿಸಿದ ತುಮ್ ಕೌನ್ ಹೋ ಬೇ, ಕವಿ ಹುಸೇನ್ ಹೈದರಿ ರಚಿಸಿದ ಮೇ ಹಿಂದೂಸ್ತಾನಿ ಮುಸಲ್ಮಾನ್ ಹೂಂ ವೈರಲ್ ಆಗಿತ್ತು,

ಕೋಲ್ಕತ್ತಾದ ಪಾರ್ಕ್ ಸರ್ಕಸ್ ಮತ್ತು ದೆಹಲಿಯ ಶಾಹೀನ್‌ಬಾಗ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಗಳಿಂದ ಸ್ಫೂರ್ತಿ ಪಡೆದು ರಚಿಸಿದ ಹಮ್ ಬೀ ಕಾಂತ್ರಿಕಾರಿ, ಗಾಯಕ ಸೆವೆನ್ ಹಾಡಿದ ಯೇ ಟುಕ್ಡೇ ಟುಕ್ಡೇ ಕೌನ್ ಹೈ ಎಂಬ ರ‍್ಯಾಪ್ ಹಾಡುಗಳೂ ಗಮನ ಸೆಳೆದವು.

ಆಮ್ ಆದ್ಮಿ ಸರ್ಕಾರ ಈ ಘೋಷಣೆಯನ್ನು ರಾಜಕೀಯ ಪೋಸ್ಟರ್‌ನಲ್ಲಿ ಬಳಸಿತು. ಅದೇ ವೇಳೆ ‘ಯಾತ್ರಾ ಡಾಟ್ ಕಾಂ’ ಪ್ರವಾಸಿ ಸಂಸ್ಥೆ ತನ್ನ ಜಾಹೀರಾತಿನಲ್ಲಿ ‘ವಿಮಾನದ ವಿಂಡೊ ಸೀಟ್ ಆಯ್ಕೆ ಮಾಡುವ ಆಜಾದಿ ನಮಗೆ ಬೇಕು’ ಎಂದು ಆಜಾದಿ ಘೋಷಣೆಯ ಸಾಲು ಬಳಸಿಕೊಂಡಿತು.

2016ರಲ್ಲಿ ಡಬ್‌ಸ್ಟೆಪ್ ಕಲಾವಿದ ಸಿದ್ದಾರ್ಥ ಶರ್ಮಾ (ಡಬ್ ಶರ್ಮಾ) ಕನ್ಹಯ್ಯಾನ ಭಾಷಣದಲ್ಲಿ ಆಜಾದಿ ಘೋಷಣೆಯನ್ನು ಪಂಜಾಬಿ ಜನಪದ ಶ್ರುತಿಯೊಂದಿಗೆ ರಿಮಿಕ್ಸ್ ಮಾಡಿದಾಗ ಆ ಹಾಡು ವೈರಲ್ ಆಗಿತ್ತು. ಲೋಕಸಭಾ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ ಡಬ್ ಶರ್ಮಾರ ಹಾಡನ್ನು ಬಳಸಿ ವಿಡಿಯೊವೊಂದನ್ನು ಟ್ವೀಟ್ ಮಾಡಿ, ‘ಡರ್ ಕೇ ಆಗೇ ಆಜಾದಿ’ ಎಂಬ ಶೀರ್ಷಿಕೆ ನೀಡಿತ್ತು. ಇದಕ್ಕೆ ಉತ್ತರವಾಗಿ ಬಿಜೆಪಿ ‘ಕಾಂಗ್ರೆಸ್ ಸೇ ಆಜಾದಿ’ ಎಂದು ಆಜಾದಿ ರೀಮಿಕ್ಸ್ ಹಾಡಿನ ಕೆಲವು ಸಾಲು ಬಳಸಿ ವಿಡಿಯೊ ಟ್ವೀಟಿಸಿತ್ತು

2019ರಲ್ಲಿ ಜೋಯಾ ಅಖ್ತರ್ ನಿರ್ದೇಶಿಸಿದ ಗಲ್ಲೀ ಬಾಯ್ ಸಿನಿಮಾದಲ್ಲಿ ಡಬ್ ಶರ್ಮಾ ರಿಮಿಕ್ಸ್ ಮಾಡಿದ ಆಜಾದಿ ಹಾಡು ಬಳಕೆಗೊಂಡಿತು. ಆ ಚಿತ್ರದಲ್ಲಿ ‘ಬೋಲೊ ಆಜಾದಿ’ ಎಂಬ ಹಾಡನ್ನು ರ‍್ಯಾಪರ್ ಡಿವೈನ್ ಮತ್ತು ಡಬ್ ಶರ್ಮಾ ಹಾಡಿದ್ದರು. 2016ರಲ್ಲಿ ಕೇರಳದ ಗಾಯಕಿ ಪುಷ್ಪಾವತಿ ಪೊಯಪಡುತ್ತು ಆಜಾದಿ ಘೋಷಣೆಯನ್ನು ಹಾಡಿನ ಮೂಲಕ ಪ್ರಸ್ತುತಿ ಪಡಿಸಿದ್ದರು. 2018ರಲ್ಲಿ ತೆರೆಕಂಡ ‘ಬಿ. ಟೆಕ್ ಮಲಯಾಳಂ’ ಸಿನಿಮಾದಲ್ಲಿ ‘ಆಜಾದಿ ಪುದಿಯುಗಮಿನಿಯಿದಾ’ ಎಂದು ಆರಂಭವಾಗುವ ಹಾಡು ಗಮನ ಸೆಳೆದಿತ್ತು. ಸಿಎಎ ವಿರುದ್ಧದ ಪ್ರತಿಭಟನೆಗಳ ವಿಡಿಯೊಗಳಿಗೆ ಈ ಹಾಡು ಈಗ ಬಳಕೆಯಾಗುತ್ತಿರುವುದನ್ನು ಕಾಣಬಹುದು.

### ಸಿಎಎ ವಿರುದ್ಧ ಪ್ರತಿಭಟನೆಯಲ್ಲಿ ಆಜಾದಿ

ಪೌರತ್ವ ಕಾಯ್ದೆ ವಿರುದ್ಧ ಪ್ರತಿಭಟಿಸಿದ ದೆಹಲಿಯ ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೆ ಪೊಲೀಸ್ ಲಾಠಿ ಪ್ರಹಾರ ನಡೆಸಿತ್ತು. ಈ ಹೊತ್ತಲ್ಲಿ ಬಿಹಾರ ಪೂರ್ನಿಯಾದಲ್ಲಿ ನಡೆಯುತ್ತಿದ್ದ ಸಿಎಎ ವಿರುದ್ಧದ ಬೃಹತ್ ಪ್ರತಿಭಟನೆಯಲ್ಲಿ ಸಿಪಿಐ ನಾಯಕರಾಗಿರುವ ಕನ್ಹಯ್ಯಾ ಕುಮಾರ್ ‘ಸುನ್‌ಲೇ ಮೋದಿ, ಹಮ್ ಲಡ್‌ಕೇ ಲೇಂಗೇ ಆಜಾದಿ , ಹಮ್ ಲೇಕೆ ರಹೇಂಗೆ ಆಜಾದಿ, ತುಮ್ ಕುಚ್ ಭೀ ಕರ್‌ಲೋ, ಹಮ್ ನಹೀ ಜುಕೇಂಗೆ’ ಎಂಬ ಘೋಷಣೆ ಕೂಗಿದರು. ಸಿಎಎ ವಿರುದ್ಧದ ಪ್ರತಿಭಟನೆಯಲ್ಲಿ ಕನ್ಹಯ್ಯಾ ಕೂಗಿದ ಈ ಆಜಾದಿ ಘೋಷಣೆಗಳು ಪ್ರತಿಭಟನೆಗೆ ಹೊಸ ಉತ್ಸಾಹವನ್ನು ತಂದುಕೊಟ್ಟಿತು. ಕ್ರಮೇಣ ಇದು ರಸ್ತೆಯಲ್ಲಿ, ಕ್ಯಾಂಪಸ್‌ನ ಒಳಗೆ ಹೊರಗೆ ದೇಶದೆಲ್ಲೆಡೆ ಪ್ರತಿಭಟನೆಯ ದನಿಯಾಗಿ ಮಾರ್ಪಟ್ಟಿತು.

### ವಿವಿಧ ಭಾಷೆಗಳಲ್ಲಿ ಆಜಾದಿ

2017ರಲ್ಲಿ ಕೇರಳದ ಎಸ್‌ಎನ್ ಕಾಲೇಜ್, ವಳಾಂಚೇರಿಯಲ್ಲಿ (ಮಲಪ್ಪುರಂ ಜಿಲ್ಲೆ) ಎಸ್‌ಎಫ್‌ಐ ನಡೆಸಿದ ಪ್ರತಿಭಟನೆಯೊಂದರಲ್ಲಿ ಆಜಾದಿ ಘೋಷಣೆಯನ್ನು ಮಲಯಾಳಂನಲ್ಲಿ ಕೂಗಲಾಗಿತ್ತು. ಕೇರಳದಲ್ಲಿ ಸಿಎಎ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳಲ್ಲಿಯೂ ಕನ್ಹಯ್ಯಾ ಕೂಗಿದ ಆಜಾದಿ ಘೋಷಣೆಯ ಮಲಯಾಳಂ ಅನುವಾದ ಬಳಕೆಯಾಗುತ್ತಿದೆ.

ಕರ್ನಾಟಕದಲ್ಲಿ ‘ನಮ್ಮೆಲ್ಲರ ಹಕ್ಕಿದು ಸ್ವಾತಂತ್ರ್ಯ, ನಮ್ಮೆಲ್ಲರ ಬದುಕಿದು ಸ್ವಾತಂತ್ರ್ಯ, ನಮ್ಮೆಲ್ಲರ ಕೂಗಿದು ಸ್ವಾತಂತ್ರ್ಯ’ ಎಂಬ ಘೋಷಣೆ ಮೊಳಗಿದರೆ, ತಮಿಳುನಾಡಿನಲ್ಲಿ ತಮಿಳು ಭಾಷೆಯಲ್ಲಿ, ಈಶಾನ್ಯ ರಾಜ್ಯವಾದ ಅಸ್ಸಾಮಿ ಭಾಷೆಯಲ್ಲಿ ‘ಆಜಾದಿ’ ಮೊಳಗುತ್ತಿದೆ.